ದಿನಾಂಕಃ **19-11-2018** ರಂದು ಪಿ.ಡಬ್ಲೂ-3 ರವರನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ.ಎಂ.ಎಸ್.ಹೆಚ್ ವಕೀಲರಿಂದಃ

ನಾನು ಖಾಯಂ ಹರವಿ ಗ್ರಾಮದ ರಹವಾಸಿ ಇರುತ್ತೇನೆ. ನಾನು ಖಾಯಂ ಆಗಿ ಅಲ್ಲಿ ವಾಸವಾಗಿರುತ್ತೇನೆ. ನಾನು ಎಸ್.ಎಸ್.ಎಲ್.ಸಿಯವರೆಗೆ ಕನ್ನಡ ಮಾಧ್ಯಮದಲ್ಲಿ ವಿದ್ಯಾಬ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಒದಲು ಮತ್ತು ಬರೆಯಲು ಸ್ಪಷ್ಟವಾಗಿ ಬರುತ್ತದೆ. ನಾನು ನನ್ನ ಸಹಿಯನ್ನು ಆಂಗ್ಲಭಾಷೆಯಲ್ಲಿ ಮಾಡುತ್ತೇನೆ. ನಾನು ಯಾವಾಗಲೂ ಸಹಿಯನ್ನು ಒಂದೇ ತರನಾಗಿ ಮಾಡುತ್ತೇನೆ. ನಾನು ಎಂದು ಎಲ್ಲಿಯೂ ಅಪ್ಪಿತಪ್ಪಿ ಬೇರೆ ಸಹಿ ಮಾಡಿರುವದಿಲ್ಲ, ಒಂದೇ ಸಹಿ ಮಾಡಿರುತ್ತೇನೆ ಅಂದರೆ ಸರಿ. ನಾನು ಶೇತ್ಕರಿ ಕೆಲಸವನ್ನು ಮಾಡುತ್ತೇನೆ. ಅದರ ರಿ.ಸ.ನಂಬರಃ 17 ಕ್ಷೇತ್ರ 01 ಎ-38 ಗುಂಟೆ ಹರವಿ ಗ್ರಾಮದಲ್ಲಿ ಇರುತ್ತದೆ. ನಾವು ಅಣ್ಣತಮ್ಮಂದಿರೂ ಎಲ್ಲರೂ ಸದರಿ ಆಸ್ತಿಯನ್ನು ಹಂಚಿಕೊಂಡಿರುತ್ತೇವೆ. ನನ್ನ ಆಸ್ತಿ ದಕ್ಷಿಣ ದಿಕ್ಕಿನಲ್ಲಿ ಬರುತ್ತದೆ. ನನ್ನ ಆಸ್ತಿಯ ಪೂರ್ವಕ್ಕೆಃ ಮಾರುತಿ ವಾಲ್ಮೀಕಿ ಇವರ ಜಮೀನು, ಪಶ್ಚಿಮಕ್ಕೆಃ ಬಸಯ್ಯ ಹೆಬ್ಬಾಳ ಇವರ ಜಮೀನು, ಉತ್ತರಕ್ಕೆಃ ನಮ್ಮದೇ ಜಮೀನು, ದಕ್ಷಿಣಕ್ಕೆಃ ಶಿವಪ್ಪ ಭದ್ರಣ್ಣನವರ ಇವರ ಜಮೀನು ಇರುತ್ತದೆ. ನಾನು ಊರಿನಲ್ಲಿ ಗ್ರಾಮ ಪಂಚಾಯತಿ ಹಾಗೂ ಚುನಾಯಿತ ಸದಸ್ಯನಾಗಲೀ ಇರುವದಿಲ್ಲ. ನಾನು ನಮ್ಮ ಊರಿನಲ್ಲಿ ನಮ್ಮ ಮುಸ್ಲಿಂ ಸಮುದಾಯದ ಮುಖಂಡ ಅಂತಾ ಈಗ ಎರಡು ಮೂರು ವರ್ಷಗಳ ಹಿಂದೆ ಇದ್ದೇನು ಮತ್ತು 5-6 ವರ್ಷಗಳ ಹಿಂದೆಯೂ ಸಹಿತ ನಾನು ಮುಸ್ಲಿಂ ಸಮುದಾಯದ ಮುಖಂಡನಿದ್ದೇನು.

ನಾನು ಊರಿನಲ್ಲಿ ಸಂಚಕಾರ ಪತ್ರ ಮತ್ತು ಇತರ ಕಾಗದಗಳನ್ನು ಬರೆದಿರುವದಿಲ್ಲ. ನಾನು ಯಾವುದೇ ವ್ಯವಹಾರದಲ್ಲಿ ಭಾಗವಹಿಸಿರುವದಿಲ್ಲ. ಈಗ ನಾನು ಸಾಕ್ಷಿ ಹೇಳಲು ಬಂದಿರುವ ಆಸ್ತಿಯ ರಿ.ಸ.ನಂಬರಃ 63/3 ಇರುತ್ತದೆ. ನಮ್ಮ ಜಮೀನಿಗೂ

ಹಾಗೂ ದಾವಾಜಮೀನಿಗೂ 3 ಕಿ.ಮೀ ಅಂತರ ಇರುತ್ತದೆ. ನಮ್ಮ ಜಮೀನಿಗೆ ಹೋಗುವ ದಿಕ್ಕು ಮತ್ತು ದಾವಾಜಮೀನಿಗೆ ಹೋಗುವ ದಿಕ್ಕು ಬೇರೆಬೇರೆಯಾಗಿರುತ್ತವೆ ಅಂದರೆ ಸರಿ. ದಾವಾ ಜಮೀನನ್ನು ವಾದಿಯು ವಹಿವಾಟು ಮಾಡುತ್ತಾನೆ. ಸದರಿಯವನು ವಹಿವಾಟು ಮಾಡುವದನ್ನು ನೋಡಿರುತ್ತೇನೆ. ವಾದಿಯು ದಾವಾ ಜಮೀನನ್ನು ವಹಿವಾಟು ಮಾಡುತ್ತಾನೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ರುದ್ರಪ್ಪನು ಸಿ.ಆರ್.ಪಿ.ಎಪನಲ್ಲಿ ಪೋಲಿಸ ಪೇದೆಯಾಗಿದ್ದನು. ಈಗ 10-12 ವರ್ಷಗಳಿಂದ ನಿವೃತ್ತಿಯಾಗಿರುತ್ತಾನೆ. ವಾದಿಯು ತಾನೇ ಸ್ವಯಂನಿವೃತ್ತಿಯಾಗಿರುತ್ತಾನೆ ಅಥವಾ ತಾನಾಗಿಯೇ ನಿವೃತ್ತಿಯಾದ ನಂತರ ಬಂದಿರುತ್ತಾನೆ ಅನ್ನುವದು ನನಗೆ ಗೊತ್ತಿರುವದಿಲ್ಲ. ಅದಕ್ಕಿಂತ ಪೂರ್ವದಲ್ಲಿ ವಾದಿಯು ಸಿ.ಆರ್.ಪಿ.ಎಫ್‌ನಲ್ಲಿ ಸೇವೆ ಸಲ್ಲಿಸುತ್ತಿದ್ದನು ಅಂದರೆ ಸರಿ.

ನನ್ನ ಪ್ರಕಾರ ವಾದಿಯು 2002 ರಿಂದ ದಾವಾ ಜಮೀನನ್ನು ವಹಿವಾಟು ಮಾಡುತ್ತಾ ಬಂದಿರುತ್ತಾನೆ. ವಾದಿಯು ನಿವೃತ್ತಿಯಾಗಿ ಬಂದ ನಂತರ 2002 ರಿಂದ 2008 ರವರೆಗೆ ಅಂದರೆ 6 ವರ್ಷಗಳ ಕಾಲ ವಾದಿಯ ತಮ್ಮನಾದ ನಿಸ್ಸೀಮಪ್ಪ ಬಸಪ್ಪ ದೇವಗಿರಿ ಈತನು ವಹಿವಾಟು ಮಾಡುತ್ತಿದ್ದನು. ದಾವಾದಾಸ್ತಿಯು ಕ್ಷೇತ್ರ 04 ಎ-15 ಗುಂಟೆ ಇರುತ್ತದೆ. ದಾವಾದಾಸ್ತಿಯ ಪೂರ್ವಕ್ಕೆಃ ಈರಮ್ಮ ರುದ್ರಯ್ಯ ಸದಾಶಿವಪೇಟ ಇವರ ಜಮೀನು, ಪಶ್ಚಿಮಕ್ಕೆಃ ಖಾಸೀಂಸಾಬ ಗೌಸುಸಾಬ ಹರಪನಹಳ್ಳಿ, ಉತ್ತರಕ್ಕೆಃ ತಿರಕಪ್ಪ ಪರಪ್ಪ ಭದ್ರಣ್ಣನವರ ಇವರ ಜಮೀನು, ದಕ್ಷಿಣಕ್ಕೆಃ ಧರ್ಮಾ ನದಿ ಇರುತ್ತದೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ದಾವಾದಾಸ್ತಿಯ ಉತ್ತರಕ್ಕೆಃ ರಮೇಶ ಮಲ್ಲೇಶಪ್ಪ ಭದ್ರಣ್ಣನವರ ಅಂತಾ ಬರೆಸಿರುತ್ತೇನೆ. ಸಾಕ್ಷಿಯು ಮುಂದುವರೆದು ಮೊದಲೂ ತಿರಕಪ್ಪ ಪರಪ್ಪ ಭದ್ರಣ್ಣನವರ ಅಂತಾ ಇತ್ತು, ಈಗ 6-7 ವರ್ಷಗಳಿಂದ ರಮೇಶ ಮಲ್ಲೇಶಪ್ಪ ಭದ್ರಣ್ಣನವರ ಅಂತಾ ಆಗಿರುತ್ತದೆ ಅಂತಾ ನುಡಿಯುತ್ತಾರೆ.

ವಾದಿಯ ತಂದೆಯ ಸಹೋದರರು ಮತ್ತು ಪ್ರತಿವಾದಿ ಇವರ ಮನೆತನದಲ್ಲಿ ಆಸ್ತಿಗೆ ಸಂಬಂಧಿಸಿದಂತೆ ನಾನು ಯಾವುದೇ ವ್ಯವಹಾರದಲ್ಲಿ ಭಾಗವಹಿಸಿರುವದಿಲ್ಲ. ಅವರ ಮನೆತನಕ್ಕೆ ಎಷ್ಟು ಜಮೀನುಗಳು ಇರುತ್ತವೆ ಅಂತಾ ನನಗೆ ಗೊತ್ತಿರುವದಿಲ್ಲ. ವಾದಿ ಮತ್ತು ಪ್ರತಿವಾದಿಯರು ಈಗ 8-10 ವರ್ಷಗಳಿಂದ ಹಿಸ್ಸೇ ಮಾಡಿಕೊಂಡಿರುತ್ತಾರೆ. ಸದರಿಯವರು ಎಲ್ಲಿ ಹಿಸ್ಸೇ ಮಾಡಿಕೊಂಡಿರುತ್ತಾರೆ ಅಂತಾ ನನಗೆ ಗೊತ್ತಿರುವದಿಲ್ಲ. ಸದರಿಯವರು ಮನೆತನದ ಹಿಸ್ಸೇ ಮಾಡಿಕೊಳ್ಳುವ ಸಮಯದಲ್ಲಿ ನಾನು ಭಾಗವಹಿಸಿರುವದಿಲ್ಲ. ನಾನು ನನ್ನ ಸಾಕ್ಷಿ ಪ್ರಮಾಣದಲ್ಲಿ ವಾದಿ ಮನೆತನದವರು 1987 ರಲ್ಲಿ ಹಿಸ್ಸೇ ಮಾಡಿಕೊಂಡಿರುತ್ತಾರೆ ಅಂತಾ ನಾನು ಬರೆಸಿರುವದಿಲ್ಲ. ಖರೀದಿ ವ್ಯವಹಾರದಲ್ಲಿ ನನ್ನನ್ನು ಕರೆದಿರುತ್ತಾರೆ. ಖರೀದಿ ವ್ಯವಹಾರವು ದಿನಾಂಕಃ 10-05-2002 ರಂದು ಆಗಿರುತ್ತದೆ. ಇದಕ್ಕೂ ಮೊದಲು ವಾದಿ ಮತ್ತು ಪ್ರತಿವಾದಿ ಖರೀದಿ ವ್ಯವಹಾರ ಮಾಡಿಕೊಂಡಿದ್ದರು. ಸದರಿ ವ್ಯವಹಾರದಲ್ಲಿ ನಾನು ಭಾಗವಹಿಸಿರುವದಿಲ್ಲ. ಸದರಿ ವ್ಯವಹಾರವನ್ನು ಒಂದುವಾರಕ್ಕಿಂತ ಮುಂಚೆ ಮಾಡಿಕೊಂಡಿರುತ್ತಾರೆ. ಸದರಿ ವ್ಯವಹಾರವು ಪ್ರತಿವಾದಿಯ ಮಗಳ ಮದುವೆಗಾಗಿ ಕೊಡಲಾಗಿರುತ್ತದೆ ಅಂತಾ ನನಗೆ ಪಂಚರು ಹೇಳಿರುತ್ತಾರೆ.

ವಾದಿ ಮತ್ತು ಪ್ರತಿವಾದಿಯರು ಖರೀದಿ ಸಂಚಕಾರಕ್ಕಾಗಿ ನಿರ್ಭಂಧಗಳನ್ನು ಪಂಚರು ನನಗೆ ಹೇಳಿರುವದಿಲ್ಲ. ಕಾಗದ ಬರೆಯುವ ಪೂರ್ವದಲ್ಲಿ ನಡೆದ ಮಾತುಕತೆ ವ್ಯವಹಾರದಲ್ಲಿ ಯಾವುದೇ ಹಣವನ್ನು ಕೊಟ್ಟಿರುವದಿಲ್ಲ. ಯಾವುದೇ ವ್ಯವಹಾರವಾದರೂ ಸಂಚಕಾರ ಅಂತಾ ಮೊದಲು ಹಣ ಪಾವತಿ ಮಾಡುತ್ತಾರೆ ಅಂದರೆ ಸರಿ. ನನಗೆ ಪಂಚರು ಪ್ರತಿವಾದಿಯ ಮಗಳ ಮದುವೆ ಇರುವದರಿಂದ ಒಂದೇ ಸಾರಿ ಹಣಕೊಟ್ಟ ಬಗ್ಗೆ ಪಂಚರು ನನಗೆ ಹೇಳಿರುತ್ತಾರೆ. ರೂ.11 ಮತ್ತು ರೂ.51 ರೂಪಾಯಿ ಕೊಟ್ಟರೆ ವಾದಿಗೆ ಮತ್ತು ಪ್ರತಿವಾದಿಗೆ ಯಾವುದೇ ಹಾನಿಯಾಗುತ್ತಿರಲಿಲ್ಲ ಅಂದರೆ ಸರಿ. ಪ್ರತಿವಾದಿಯ ಮಕ್ಕಳ ಹೆಸರು ನನಗೆ ಗೊತ್ತಿರುವದಿಲ್ಲ. ಪ್ರತಿವಾದಿಯನ್ನು ನಾನು

ನೋಡಿರುತ್ತೇನೆ. ಪ್ರತಿವಾದಿಯು ಖಾಯಂ ಆಗಿ ಬಂಕಾಪೂರ ಗ್ರಾಮದಲ್ಲಿ ವಾಸವಾಗಿರುತ್ತಾನೆ. ನಾನು ಪ್ರತಿವಾದಿಯನ್ನು ಊರಿಗೆ ಆಗ ಈಗ ಬಂದುಹೋದಾಗ ನೋಡಿರುತ್ತೇನೆ.

ಸಂಚಕಾರ ಪತ್ರಕ್ಕೆ ಸಾಕ್ಷಿ ಅಂತಾ ಸಹಿ ಮಾಡಲು ನನ್ನನ್ನು ವಾದಿ ಕರೆದಿರುತ್ತಾನೆ ಪಂಚರು ಕಾಗದವನ್ನು ಬರೆಯಬೇಕಾದರೆ ನಾನು ಹೋಗಿರುತ್ತೇನೆ. ವಾದಿಯು ಕಾಗದವನ್ನು ಬರೆದಿರುತ್ತಾನೆ. ವಾದಿಯು ನನಗೆ ಹೊಲದ ವ್ಯವಹಾರಕ್ಕೆ ಸಂಬಂಧಿಸಿದಂತೆ ನನ್ನನ್ನು ಕರೆದಿರುತ್ತಾನೆ. ಕಾಗದ ಬರೆಯುವಾಗ ಹಿಂದೆ ಆದ ವ್ಯವಹಾರದ ಬಗ್ಗೆ ಪಂಚರು ನನಗೆ ಹೇಳಿರುತ್ತಾರೆ. ಸಂಚಕಾರ ಪತ್ರವನ್ನು ನಾನು ಒದಿ ತಿಳಿದುಕೊಂಡಿರುತ್ತೇನೆ ಸದರಿ ಕಾಗದದಲ್ಲಿ ಹಿಂದೆ ವ್ಯವಹಾರ ಆಗಿದ್ದು ಈ ದಿನ ಹಣಕೊಡುತ್ತಿದ್ದೇವೆ ಅಂತಾ ಬರೆದ ಬಗ್ಗೆ ನನಗೆ ಗೊತ್ತಿರುವದಿಲ್ಲ. ಸದರಿ ದಾಖಲೆಯನ್ನು ನಾನು ಒದಿತಿಳಿದುಕೊಂಡಿರುತ್ತೇನೆ. ಖರೀದಿ ಪತ್ರದಲ್ಲಿ ಯಾವಾಗ ಖರೀದಿ ಮಾಡಿಕೊಡಬೇಕು ಅಂತಾ ಬರೆಯಲಾಗಿದೆ ಎಂದು ನನಗೆ ಗೊತ್ತಿರುವದಿಲ್ಲ. ಖರೀದಿ ಪತ್ರದಲ್ಲಿ ಮತ್ತೇ ಯಾವುದೇ ಷರತ್ತುಗಳು ಇರುವದಿಲ್ಲ.

ಖರೀದಿ ವ್ಯವಹಾರ ಮಾಡುವ ಸಮಯದಲ್ಲಿ ದಾವಾದಾಸ್ತಿಗೆ ಸಂಬಂಧಿಸಿದ ಪಹಣಿ ಪತ್ರಿಕೆಯನ್ನು ನಾನು ನೋಡಿರುವದಿಲ್ಲ. ಸದರಿ ಪಹಣಿ ಪತ್ರಿಕೆಯಲ್ಲಿ ಯಾರ ಯಾರ ಹೆಸರು ದಾಖಲಾಗಿರುತ್ತದೆ ಅಂತಾ ನಾನು ಕೇಳಿ ತಿಳಿದುಕೊಂಡಿರುವದಿಲ್ಲ. ರುದ್ರಪ್ಪನು ಸಹಿ ಮಾಡಲು ನನ್ನನ್ನು ಕರೆದಿದ್ದರಿಂದ ನಾನು ಸಹಿ ಮಾಡಿರುತ್ತೇನೆ. ಸಾಮಾನ್ಯವಾಗಿ ವ್ಯವಹಾರವಾದ ನಂತರ ಕಾಗದ ಬರೆಯುತ್ತಾರೆ ಅಂದರೆ ಸರಿ. ನಾನು ಹೋದಾಗ ಕಾಗದ ಬರೆಯುತ್ತಿದ್ದರು, ಆದ್ದರಿಂದ ಏನೂ ವ್ಯವಹಾರ ಆಗಿರುತ್ತದೆ ಅಂತಾ ನನಗೆ ಗೊತ್ತಿರುತ್ತದೆ.

ವಾದಿಯು ನಾನು ಮತ್ತು ಒಂದೇ ವಾರಿಗೆಯವರು ಮತ್ತು ಒಂದೇ ಶಾಲೆಯಲ್ಲಿ ಕಲೆತಿರುತ್ತೇವೆ ಅಂದರೆ ಸರಿ. ನಾನು ಮತ್ತು ವಾದಿ ಹರವಿ ಗ್ರಾಮದಲ್ಲಿ ಒಂದರಿಂದ ನಾಲ್ಕನೇ ತರಗತಿಯವರೆಗೆ ಕೂಡಿ ಕಲೆತಿರುತ್ತೇವೆ. ನನ್ನ ಬರಹ

ಸರಿಯಾಗದೇ ಇರುವದರಿಂದ ನಾನು ಕಾಗದವನ್ನು ಬರೆದಿರುವದಿಲ್ಲ. ನನ್ನ ಮತ್ತು ವಾದಿಯನ್ನು ಹೊರತುಪಡಿಸಿ ಬರೆಯುವವರು ಯಾರು ಇರಲಿಲ್ಲ.

ನಾನು ಛಾಪಾಕಾಗದವನ್ನು ನೋಡಿರುತ್ತೇನೆ. ಅದರ ಮುಖಬಲೆಯು ರೂ.50/- ಇರುತ್ತದೆ. ಸದರಿ ಛಾಪಾಕಾಗದವು ದಿನಾಂಕಃ 09-05-2002 ನೇ ದಿನಾಂಕದ್ದು ಇರುತ್ತದೆ. ಸದರಿ ದಿನದಂದು ರೂ.32,450/- ಕೊಡಲಾಗಿರುತ್ತದೆ. ಸದರಿ ಹಣವು ಎಷ್ಟು ಮುಖಬಲೆಯ ನೋಟುಗಳು ಇದ್ದವು ಅಂತಾ ನನಗೆ ಗೊತ್ತಿರುವದಿಲ್ಲ. ನಾನು ಸದರಿ ಹಣಕೊಡುವಾಗ ಎಣಿಸಿಕೊಟ್ಟಿರುವದಿಲ್ಲ. ಖರೀದಿ ದಿನದಂದು ಖರೀದಿ ಪತ್ರವನ್ನು ನೋಂದಾಯಿಸಿ ಕೊಡಲು ತೊಂದರೆ ಇತ್ತಾ ಅಂತಾ ಕೇಳಲು ಸಾಕ್ಷಿಯು ವಾದಿ ಮತ್ತು ಪ್ರತಿವಾದಿಯು ಚಿಕ್ಕಪ್ಪ ಮತ್ತು ಮಗನಿರುವದರಿಂದ ನೋಂದಾಯಿಸಿಕೊಟ್ಟಿರುವದಿಲ್ಲ ಎಂದು ನುಡಿಯುತ್ತಾರೆ. ವಾದಿ ಮತ್ತು ಪ್ರತಿವಾದಿ ಚಿಕ್ಕಪ್ಪ ಮತ್ತು ಮಗ ಇರುವದರಿಂದ ಕಾಗದವನ್ನು ಮಾಡದೇ ಇದ್ದರೆ ನಡೆಯುತ್ತಿತ್ತು ಅಂದರೆ ಸಾಕ್ಷಿಯು ಅದು ಅವರಿಗೆ ಬಿಟ್ಟ ವಿಷಯ ಎಂದು ನುಡಿಯುತ್ತಾರೆ. ಆ ದಿನ ನನ್ನ ಹತ್ತಿರ ಪೆನ್ನ ಇರುವದಿಲ್ಲ. ನಾನು ನೀಲಿ ಪೆನ್ನನಿಂದ ಸಹಿ ಮಾಡಿರುತ್ತೇನೆ. ಕಾಗದವನ್ನು ವಾದಿಯು ಕರಿಮಸಿಯ ಪೆನ್ನಿನಿಂದ ಬರೆದಿರುತ್ತಾರೆ. ಪೆನ್ನಿನಲ್ಲಿರುವ ಮಸಿಯು ತೀರಿದ್ದರಿಂದ ನಾನು ಹೊಸಪೆನ್ನಿನಿಂದ ಸಹಿ ಮಾಡಿರುತ್ತೇನೆ. ಸದರಿ ಪೆನ್ನನ್ನು ವಾದಿಯು ತಂದಿರುತ್ತಾನೆ. ವಾದಿಯು ಕರೀಮಸಿ ಪೆನ್ನನಿಂದ ಸಹಿ ಮಾಡಿರುತ್ತಾನೆ. ದಿನಾಂಕ, ಸ್ಥಳ ಯಾವ ಪೆನ್ನಿನಿಂದ ಬರೆದಿರುತ್ತಾರೆ ಅಂತಾ ನನಗೆ ಗೊತ್ತಿರುವದಿಲ್ಲ.

ನಿ.ಪಿ-4 ರಲ್ಲಿರುವ ಸಹಿ ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಿರುವ ಸಹಿ ಬೇರೆ ಬೇರೆಯಾಗಿರುತ್ತವೆ ಅಂದರೆ ಸರಿ. ಸಹಿಯ ಮುಂದೆ ನನ್ನ ಹೆಸರನ್ನು ಬರೆದಿರುತ್ತೇನೆ ಅಂತಾ ನುಡಿಯುತ್ತಾರೆ. ಎಂ ಅಂತಾ ಬರೆದಿರುವದು ಬೇರೆ ಬೇರೆಯಾಗಿರುತ್ತದೆ ಅಂದರೆ ಸರಿಯಲ್ಲ. ಸಂಚಕಾರ ಪತ್ರಕ್ಕೆ ನಾನು ಸಹಿ ಮಾಡಿರುವದಿಲ್ಲ ಅದು ನನ್ನ ಸಹಿ ಇರುವದಿಲ್ಲ ಅಂದರೆ ಸರಿಯಲ್ಲ. ಈಗ ನಿ.ಪಿ-4 ರಲ್ಲಿ ಮಾಡಿದ ಸಹಿಯ ಹಾಗೇ ಮಾಡಲು ಹೋಗಿ ಸಾಕ್ಷಿಯ ಪ್ರಮಾಣ ಪತ್ರದಲ್ಲಿ ಬೇರೆ ಸಹಿ ಮಾಡಿರುತ್ತೇನೆ ಅಂದರೆ

ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿರುತ್ತದೆ. ನಾನು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ರೂ32,500/- ರೂಗಳಿಗೆ ವ್ಯವಹಾರವಾಗಿರುತ್ತದೆ, ಮುಂಗಡವಾಗಿ ರೂ.32,450/-ರೂಗಳನ್ನು ಕೊಟ್ಟಿರುತ್ತಾರೆ ಅಂತಾ ಬರೆಸಿರುವದು ಸುಳ್ಳು ಇರುತ್ತದೆ ಅಂದರೆ ಸರಿಯಲ್ಲ. ಅದೇ ದಿನ ಕಬ್ಜೆ ಕೊಟ್ಟಿರುತ್ತಾರೆ ಅಂತಾ ಸುಳ್ಳು ಬರೆಸಿರುತ್ತೇನೆ ಅಂದರೆ ಸರಿಯಲ್ಲ.

ದಾವಾದಾಸ್ತಿಯು ದಕ್ಷಿಣ ದಿಕ್ಕಿಗೆ ಇರುತ್ತದೆ. ಇನ್ನುಳಿದ 4 ಎಕರೆ ಬಸಪ್ಪ, ಚನ್ನಬಸಪ್ಪ, ಗಿರಿಮಲ್ಲಪ್ಪ ಇವರಿಗೆ ಸಂಬಂಧಿಸಿದ ಆಸ್ತಿ ಇರುತ್ತದೆ. ಸದರಿಯವರು ಆ ವ್ಯವಹಾರದಲ್ಲಿ ಭಾಗವಹಿಸಿರುವದಿಲ್ಲ. ಸದರಿಯವರ ಹೆಸರು ಪಹಣಿ ಪತ್ರಿಕೆಯಲ್ಲಿ ಸಾಮೂಹಿಕವಾಗಿ ದಾಖಲು ಇರುತ್ತದೆ ಅಂದರೆ ಸರಿ. ವಾದಿ ಮತ್ತು ವಾದಿಯ ತಂದೆಯ ಸಹೋದರರು ಯಾವ ದಿಕ್ಕಿನಲ್ಲಿ ಇರುತ್ತಾರೆ ಅಂತಾ ನನಗೆ ಗೊತ್ತಿರುವದಿಲ್ಲ. 04-15 ಗುಂಟೆಯಲ್ಲಿ 4 ಭಾಗ ಮಾಡಿರುತ್ತಾರೆ. ಸದರಿ ಜಮೀನಿನಲ್ಲಿ ಪ್ರತಿವಾದಿಗೆ 01 ಎಕರೆ 03 ಗುಂಟೆ 08 ಆಣೆಯ ಪ್ರತಿವಾದಿಯ ಹಿಸ್ಸೇಗೆ ಬಂದಿದ್ದು ಸದರಿ ಆಸ್ತಿಯ ಯಾವ ದಿಕ್ಕಿಗೆ ವಾದಿಯರು ಇರುತ್ತಾರೆ ಅಂತಾ ನಾನು ಕೇಳಿ ತಿಳಿದುಕೊಂಡಿರುವದಿಲ್ಲ. ದಾವಾದಾಸ್ತಿಗೆ ಸಂಬಂಧಿಸಿದಂತೆ ಪ್ರತಿವಾದಿಯು ವಾದಿಗೆ ಯಾವುದೇ ಸಂಚಕಾರ ಪತ್ರ ಬರೆದುಕೊಟ್ಟಿರುವದಿಲ್ಲ ಅವನಿಗೆ ಯಾವುದೇ ರೀತಿಯ ಹಣಕಾಸಿನ ತೊಂದರೆ ಇರಲಿಲ್ಲ ಅಂದರೆ ಸರಿಯಲ್ಲ. ಆಗಿನ ಕಾಲದಲ್ಲಿ ಪ್ರತಿವಾದಿಗೆ ರೂ.8000/-ಸಂಬಳಬರುತ್ತಿದ್ದರಿಂದ ಅವನಿಗೆ ಹಣಕಾಸಿನ ತೊಂದರೆ ಇರಲಿಲ್ಲ ಅಂದರೆ ಸರಿಯಲ್ಲ. ಸದರಿ ಜಮೀನನ್ನು ಹೊರತುಪಡಿಸಿ ಪ್ರತಿವಾದಿಗೆ ಊರಿನಲ್ಲಿ 4 ಎಕರೆ ಜಮೀನು ಇತ್ತು ಅಂದರೆ ಸರಿ. ಈಗ 15 ವರ್ಷಗಳಿಂದ ರೂ.200 ರಿಂದ 300 ರವರೆಗೆ ಲಾವಣಿ ಕೊಡುತ್ತಿದ್ದರು. ಧರ್ಮಾ ನದಿ ಇರುವದರಿಂದ ದಾವಾದಾಸ್ತಿಯಲ್ಲಿ ವರ್ಷಕ್ಕೆ ಎರಡು ಪೀಕು ಬರುತ್ತದೆ ಅಂದರೆ ಸರಿಯಲ್ಲ. ವರ್ಷಕ್ಕೆ ಒಂದು ಪೀಕು ಬರುತ್ತದೆ. ಅದರಿಂದ ರೂ.10,000/- ವರ್ಷಕ್ಕೆ

ಆದಾಯ ಬರುತ್ತದೆ. ನಾನು ಮತ್ತು ವಾದಿಯು ಒಂದೇ ತರಗತಿಯಲ್ಲಿ ಕಲೆತಿರುವದರಿಂದ ವಾದಿಗೆ ಅನುಕೂಲವಾಗಲೀ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಿ.ಪಿ-4 ರಲ್ಲಿರುವ ಸಹಿ ಬೇರೆ ಯಾರದೋ ಇದ್ದರೂ ಇದು ನನ್ನ ಸಹಿ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಹೇಳಿಕೆಯಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸ ಇದೆ ಎಂದು ಒಪ್ಪಿರುತ್ತಾರೆ.

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ದಿನಾಂಕಃ 19-11-2018 ಹಾನಗಲ್.

ಸಾಕ್ಷಿದಾರರ ಸಹಿ.